## ಓಡಿ ಹೋಗಿದ್ದು

‘ನಿಮ್ಮಕ್ಕನನ್ನು ಅವತ್ತು ಯಾಕೆ ಹೊಡೆದೆ? ಅದನ್ನು ನೋಡಿದಾಗ ನನಗೆ ಭಯವೇ ಆಗಿತ್ತು’ ಎಂದು ಸ್ಮಿತಾ ಗೆಳತಿ ಲಿಲ್ಲಿಯನ್ನು ಕೇಳಿದಳು. ‘ಅವಳು ಲವರ್ ಜೊತೆ ಮನೆ ಬಿಟ್ಟು ಓಡಿ ಹೋಗಿದ್ಲು... ಅವತ್ತು ಸಿಕ್ಕಾಗ ಸಿಟ್ಟು ತಡೆಯಲಾಗದೇ ಹೊಡೆದುಬಿಟ್ಟೆ. ಇವತ್ತೂ ಆ ಸಿಟ್ಟು ಆರಿಲ್ಲ...’ ಎಂದು ಬೇಸರದಿಂದ ಲಿಲ್ಲಿ ವಿವರಣೆ ಕೊಟ್ಟಳು. ‘ಸರಿ ಮಾರಾಯ್ತಿ, ಅವಳು ಲವರ್ ಜೊತೆಗೆ ಹೋಗಿ ಮದುವೆಯಾದ್ರೆ ನಿನಗೇನು ತೊಂದರೆ? ಅವಳ ಜೀವನ, ಅವಳ ಇಷ್ಟ...’ ಎಂದು ಸ್ಮಿತಾ ಗೆಳತಿಗೆ ಸಮಾಧಾನ ಹೇಳಿದಳು. ‘ಅಯ್ಯೋ, ಅವಳು ಓಡಿ ಹೋಗಿದ್ದು ನನ್ನ ಲವರ್ ಜೊತೆಗೆ...’ ಎಂದು ಲಿಲ್ಲಿ ಹೇಳಿದಾಗ ಸ್ಮಿತಾಳ ತೆರೆದ ಬಾಯಿ ತೆರೆದಂತೆಯೇ ಇತ್ತು.

**ಪ್ರಕಾಶ ಎಸ್. ಮನ್ನಂಗಿ**





## ಮೊಟ್ಟೆ ವ್ಯಾಪಾರ

ಕೋಳಿ ಮೊಟ್ಟೆ ವ್ಯಾಪಾರಿ ಗುಂಡಪ್ಪ ತಮ್ಮ ಪುತ್ರರತ್ನನ ವಿದ್ಯಾಭ್ಯಾಸದ ಬಗ್ಗೆ ಚಿಂತಾಕ್ರಾಂತರಾಗಿದ್ದರು. ಒಂದು ದಿನ ಮಗನ ಪ್ರಗತಿಯ ಬಗ್ಗೆ ವಿಚಾರಿಸಲು ಅವನ ಗಣಿತದ ಮೇಷ್ಟ್ರನ್ನು ಭೇಟಿ ಮಾಡಿದರು. ‘ಸಾರ್, ಹೇಗಿದೆ ನನ್ನ ಮಗನ ಪ್ರಗತಿ? ಈ ನಡುವೆ ಅವನ ಕಲಿಕೆಯಲ್ಲಿ ಏನಾದರೂ ಸುಧಾರಣೆ ಆಗಿದೆಯೇ?’ ಎಂದು ಕೇಳಿದರು. ಗುಂಡಪ್ಪನವರ ಆತಂಕವನ್ನು ಅರ್ಥಮಾಡಿಕೊಂಡ ಮೇಷ್ಟ್ರು ತಮಾಷೆಯಾಗಿಯೇ, ‘ನೀವು ಮೊಟ್ಟೆ ವ್ಯಾಪಾರ ಮಾಡ್ತಿದ್ದೀರಾ, ಅವನು ಅದನ್ನು ತೆಗೆದುಕೊಳ್ಳುತ್ತಿದ್ದಾನೆ ಅಷ್ಟೇ!’ ಎಂದರು.

**ವಿ. ವಿಜಯೇಂದ್ರ ರಾವ್**

ಕಲೆ: ಗಣೇಶ್ ಆಚಾರ್ಯ